**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ **242/2014** ಸಿ.ಡಬ್ಲ್ಯೂ –09 ಪಿ.ಡಬ್ಲ್ಯೂ -07

ದಿನಾಂಕಃ **25.09.2025**

ಸತ್ಯ ಪ್ರತಿಜ್ಞೆಯ ಮೇರೆಗೆ

---

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಎಸ್ ಎ ಕೆ ವಕೀಲರಿಂದಃ

ಸದರಿ ಪ್ರಕರಣವು ಠಾಣೆಯಲ್ಲಿ ದೂರನ್ನು ದಾಖಲಿಸಿದ ಮೇರೆಗೆ ಆಗಿರುತ್ತದೆ. ಸಾಮಾನ್ಯವಾಗಿ ಯಾವುದಾದರೂ ಪ್ರಕರಣದಲ್ಲಿ ಹೆಚ್ಚಿನ ಗಾಯ ಆಗಿದ್ದರೆ ಮೊದಲು ಅವರನ್ನು ಆಸ್ಪತ್ರೆಗೆ ಕಳುಹಿಸುತ್ತೇವೆ, ನಂತರ ಪ್ರಕರಣವನ್ನು ದಾಖಲಿಸುತ್ತೇವೆ. ಈ ಪ್ರಕರಣದಲ್ಲಿ ದೂರನ್ನು ದಾಖಲಿಸಿಕೊಂಡು ಗಾಯಾಳುಗಳನ್ನು ಆಸ್ಪತ್ರೆಗೆ ಕಳುಹಿಸಿರುತ್ತೇವೆ. ನನ್ನ ತನಿಖೆಯ ಕಾಲದಲ್ಲಿ ಆರೋಪಿತರ ಮತ್ತು ಫಿರ್ಯಾಧಿದಾರರ ಮಧ್ಯೆ ಹೊಲ ಸಾಗುವಳಿ ಮಾಡುವ ಸಂಬಂಧವಾಗಿ ಮೊದಲಿನಿಂದಲೂ ತಕರಾರು ಇತ್ತು ಅಂತಾ ಕಂಡು ಬಂದಿತ್ತು ಎಂದರೆ ಸರಿ. ನನ್ನ ತನಿಖೆ ಕಾಲದಲ್ಲಿ ಯಾರ ಹತ್ತಿರ ಬಿರಲಿಂಗೇಶ್ವರ ದೇವಸ್ಥಾನದ ಜಮೀನಿನ ಕಬ್ಜೆ ಇತ್ತು ಅಂತಾ ವಿಚಾರಣೆ ಮಾಡಿರುವುದಿಲ್ಲ. ಪಿರ್ಯಾಧಿದಾರರು ಅವರ ಫಿಯಾರ್ದಿಯನ್ನು ನೀಡುವುದಕ್ಕಿಂತ ಮುಂಚೆ ಆರೋಪಿತರು ಪಿರ್ಯಾಧಿದಾರರ ಮೇಲೆ ಬೇರೆ ಪ್ರಕರಣ ಸಂಖ್ಯೆ 106/2022 ವನ್ನು ದಾಖಲಿಸಿದ್ದರು ಎಂದರೆ ಸರಿ. ಪಾಳೆ ಪ್ರಕಾರ ಹೊಲವನ್ನು ಸಾಗುವಳಿ ಮಾಡುವುದು ಇದ್ದು, ಆದರೆ ಪಿರ್ಯಾಧಿದಾರರು ಒಂದು ವರ್ಷ ಹೆಚ್ಚಿಗೆ ಸಾಗುವಳಿ ಮಾಡುವುದಕ್ಕೆ ಕೇಳಿದಕ್ಕಾಗಿ ತಕರಾರು ಆಗಿತ್ತು ಅಂತಾ ನನ್ನ ತನಿಖೆಯ ವೇಳೆಯಲ್ಲಿ ಕಂಡು ಬಂದಿರುತ್ತದೆ ಎಂದರೆ ಸರಿ. ಆರೋಪಿತರು ಪಾಳೆ ಪ್ರಕಾರವಾಗಿ ಹೊಲವನ್ನು ಸಾಗುವಳಿ ಮಾಡಬೇಕು ಅಂತಾ ಹೇಳಿದ ಕಾರಣ ಪಿರ್ಯಾಧಿದಾರರು ಆರೋಪಿತರ ವಿರುದ್ದ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಘಟನಾ ಸ್ಥಳವನ್ನು ಚಾಸಾ 4 ರವರು ತೋರಿಸಿರುತ್ತಾರೆ. ಚಾಸಾ 1 ಮತ್ತು 4 ರವರಿಗೆ ಅಂದಾಜು ಬೆ.10.30 ಗಂಟೆಗೆ ವೈದ್ಯಕೀಯ ತಪಾಸಣೆ ಮಾಡಿಸಿರುತ್ತೇನೆ. ಚಾಸಾ 1 ಮತ್ತು 4 ರವರನ್ನು ಪರೀಕ್ಷೆ ಮಾಡಿ ವೈದ್ಯರು ಎಕ್ಸರೆ ಮತ್ತು

ಬ್ರೇನ್ ಸ್ಕ್ಯಾನಿಂಗ್ ಮಾಡಬೇಕು ಅಂತಾ ವರದಿ ನೀಡಿರುತ್ತಾರೆ ಎಂದರೆ ಸರಿ. ಸದರಿ ಚಾಸಾ 1 ಮತ್ತು 4 ರವರು ಎಕ್ಸರೆ ಮತ್ತು ಬ್ರೇನ್ ಸ್ಕ್ಯಾನಿಂಗ್ ನಂತರ ಠಾಣೆಗೆ ಬಂದಿರುವುದಿಲ್ಲ. ಚಾಸಾ 1 ರವರನ್ನು ನಾನು ಫಿರ್ಯಾಧಿಯನ್ನು ಪಡೆದ ಬಳಿಕ ಭೇಟಿ ಆಗಿರುವುದಿಲ್ಲ. ಈ ಪ್ರಕರಣದಲ್ಲಿ ಚಾಸಾ 1 ರವರು ಆರೋಪಿತರಿಗೆ ಹೊಡೆ ಬಡೆ ಮಾಡಿದ್ದು, ಆರೋಪಿತರು ಅವರ ವಿರುದ್ದ ನೀಡಿದ ದೂರಿಗೆ ಅನುಕೂಲವಾಗಬೇಕು ಅಂತಾ ಆರೋಪಿತರ ವಿರುದ್ದ ಚಾಸಾ 1 ರವರು ಒಂದು ಖೋಟ್ಟಿ ಫಿರ್ಯಾಧಿಯನ್ನು ಸಲ್ಲಿಸಿದ್ದು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ 12-09-2012 ರಿಂದ ದಿಃ 12-02-2014 ರವರೆಗೆ ನಿಂಬರ್ಗಾ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ. 18-10-2013 ರಂದು ಬೆಳಗ್ಗೆ 9.30 ಗಂಟೆಗೆ ನಾನು ಠಾಣಾ ಅಧಿಕಾರಿಯ ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರು ನೀಡಿದ ಮೌಖಿಕ ಪಿರ್ಯಾಧಿಯನ್ನು ತೆಗೆದುಕೊಂಡು, ಆ ಪಿರ್ಯಾಧಿಯನ್ನು ಪಡೆದುಕೊಂಡು ಅದರ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆ 105/2013 ನ್ನು ತಯಾರಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಮ್ಮ ಸಿಬ್ಬಂದಿಯ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಗುನ್ನಾ ಸ್ಥಳದ ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮದಲ್ಲಿ ಮಧ್ಯಾಹ್ನ 01.00 ರಿಂದ 02.00 ಗಂಟೆಗೆಯವರೆಗೆ ಜರುಗಿಸಿ ಗುನ್ನಾ ಸ್ಥಳದಿಂದ ಕೋರಿಗೆ ದಿಂಡಿನ ಬಡಿಗೆ ಮತ್ತು ಮೂರು ಹಿಡಿ ಗಾತ್ರದ ಕಲ್ಲುಗಳನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ ಅದೇ ದಿನ ಸ್ವತ್ತಿನ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳುಹಿಸಿ ಅನುಮತಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 21-10-2013 ರಂದು ಆರೋಪಿ ಸಂಖ್ಯೆ 2, 4 ಮತ್ತು 6 ದಸ್ತಗೀರಿ ಮಾಡಿ ದಸ್ತಗೀರಿ ನಿಯಮಾವಳಿ ಪಾಲಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 29-10-2013 ರಂದು ಸದರಿ ಇನ್ನುಳಿದ 1, 3, 4 ಮತ್ತು 5 ನೇ ಆರೋಪಿತರನ್ನು ದಸ್ತಗೀರಿ ಮಾಡಿ ದಸ್ತಗೀರಿ ನಿಯಮಾವಳಿ ಪಾಲಿಸಿ ನ್ಯಾಯಾಂಗ ಬಂಧನಕ್ಕೆ

ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ 4 ರಿಂದ 6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ದಿಃ 19-11-2013 ರಂದು ಚಾಸಾ 4 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ನಂತರ ದಿಃ 21-11-2013 ರಂದು ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖೆ ಪೂರ್ಣಗೊಂಡ ಕಾರಣ ದಿಃ 28-11-2013 ರಂದು ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲಃ</u>

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ